ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 49/2025**

ಪ್ರ.ವ.ಬೋ.ತಾಃ 05-03-2026

ಚಾಸಾಃ 1 ಪ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ರಘುನಾಥ್ |
| ತಂದೆ/ಗಂಡನ ಹೆಸರು | ಭೂತಣ್ಣ |
| ವಯಸ್ಸು | 30 ವರ್ಷ |
| ವೃತ್ತಿ | ಚಾಲಕ ವೃತ್ತಿ |
| ವಾಸ | ಸಿಡದರಗಲ್ಲು, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ಮೃತ ಪ್ರದೀಪ್ ನನ್ನ ತಮ್ಮ. ದಿಃ 04.12.2024 ರಂದು ರಾತ್ರಿ 7.30 ಗಂಟೆ ಸಮಯದಲ್ಲಿ ದಂಡಿನದಿಬ್ಬದ ಹತ್ತಿರ ಇರುವ ಹಾಲಿನ ಡೈರಿ ಹತ್ತಿರ ನನ್ನ ತಮ್ಮ ಪ್ರದೀಪ್ ರವರು ಒಂದು ಪ್ಯಾಸೆಂಜರ್ ಆಟೋದ ಹಿಂಬದಿ ಸೀಟಿನಲ್ಲಿ ಪ್ರಯಾಣಿಕರಾಗಿ ಹೋಗುತ್ತಿದ್ದಾಗ ಆ ಸಮಯದಲ್ಲಿ ಆರೋಪಿ ಒಂದು ದ್ವಿಚಕ್ರ ವಾಹನದಲ್ಲಿ ಹಿಂದಿನಿಂದ ಅತೀ ವೇಗವಾಗಿ ಬಂದು ಆ ಆಟೋಗೆ ಡಿಕ್ಕಿಪಡಿಸಿದರು. ಇದರಿಂದ ಆ ಆಟೋ ಪಲ್ಟಿಯಾಗಿ ರಸ್ತೆ ಬದಿಯಲ್ಲಿ ಅಳವಡಿಸಿದ ಕಂಬಿಯ ಮೇಲೆ ಬಿದ್ದಿತ್ತು. ಆ ಕಂಬಿ ನನ್ನ ತಮ್ಮನಿಗೆ ತಗುಲಿ ಕೈ ಕಾಲಿಗೆ ಮತ್ತು ತಲೆಗೆ ಪೆಟ್ಟಾಯಿತು. ಆನಂತರ ನಾನು ತಕ್ಷಣ ಅಪಘಾತವಾದ ಸ್ಥಳಕ್ಕೆ ಹೋಗಿ ನನ್ನ ತಮ್ಮ ಪ್ರದೀಪ್ ರವರನ್ನು ತುಮಕೂರಿನ ಸಿದ್ದಗಂಗಾ ಆಸ್ಪತ್ರೆಗೆ ಕರೆದುಕೊಂಡು

ಹೋದೆನು. ಅದೇ ದಿನ ರಾತ್ರಿ 9.00 ಗಂಟೆಗೆ ಸಿದ್ದಗಂಗಾ ಆಸ್ಪತ್ರೆಯಲ್ಲಿ ಮೃತಪಟ್ಟರು. ಈ ವಿಚಾರವನ್ನು ಚಾಸಾ.2 ರವರು ನನಗೆ ತಿಳಿಸಿದರು. ಆನಂತರ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದುೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದಿಃ 05.12.2024 ರಂದು ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಬೆಳಗ್ಗೆ 11.00 ರಿಂದ 11.45 ಗಂಟೆಯವರೆಗೆ ನಾನು ಸ್ಥಳ ತೋರಿಸಿದ ಮೇರೆಗೆ ಚಾಸಾ.3 ಮತ್ತು 4 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿದರು. ಆ ಸ್ಥಳ ಪಂಚನಾಮೆಯನ್ನು ಈ ನೋಡುತ್ತಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದರು. ಆ ಫೋಟೋವನ್ನು ನಿಪಿ.3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ– ಆರೋಪಿತರ ಪರ ವಕೀಲರಿಂದಃ–**

ಆರೋಪಿತರ ಪರ ವಕೀಲರು ಗೈರುಹಾಜರಾಗಿದ್ದು ಯಾರೂ ಪ್ರತಿನಿಧಿಸದೇ ಇದ್ದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ